ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ 01-03-2018

**ಸಂಖ್ಯೆ:ಯುಎ3/360/2017-2018**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ 07-02-2018ರಂದು ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

-:-:-

ದಿನಾಂಕ 07-02-2018 ರಂದು ಬೆಳಿಗ್ಗೆ 11.00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ. ನಡಾವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡಾವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡಾವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 22-03-2018ರ ಒಳಗಾಗಿ, ಉಪ ಕುಲಸಚಿವರು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

**ಉಪ ಕುಲಸಚಿವ (ಪ್ರಾಧಿಕಾರ)**

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು- ಘನತೆವೆತ್ತ ರಾಜ್ಯಪಾಲರ ಅವಗಾಹನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.
7. ಎಲ್ಲಾ ಉಪಕುಲಸಚಿವರು/ ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ **07-02-2018** ರಂದು ಪೂರ್ವಾಹ್ನ **11-00** ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳು.

<u>ಸಭೆಗೆ ಹಾಜರಾದ ಸದಸ್ಯರುಗಳು</u>

| | |
|---|---|
| 1. ಪ್ರೊ.ಸಿ.ಬಸವರಾಜು, ಕುಲಪತಿಗಳು (ಪ್ರ) | ... ಅಧ್ಯಕ್ಷರು |
| 2. ಶ್ರೀ.ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು | ... ಸದಸ್ಯರು |
| 3. ಡಾ.ಎಂ.ಸಿ.ನಟರಾಜ | ... ಸದಸ್ಯರು |
| 4. ಶ್ರೀ.ಜಿ.ಅಶ್ವತ್ಥ್ ನಾರಾಯಣ | ... ಸದಸ್ಯರು |
| 5. ಶ್ರೀಮತಿ ಎಂ.ಎನ್.ಪೊನ್ನಮ್ಮ | ... ಸದಸ್ಯರು |
| 6. ಶ್ರೀ.ಪುಷ್ಪಕುಮಾರ್.ಎಂ.ವಿ. | ... ಸದಸ್ಯರು |
| 7. ಶ್ರೀ.ಕುಮಾರ್ | ... ಸದಸ್ಯರು |
| 8. ಶ್ರೀ.ಬಿ.ಇ.ಜಗದೀಶ್ | ... ಸದಸ್ಯರು |
| 9. ಶ್ರೀ.ಕೆ.ಟಿ.ಅಪ್ಪಾಜಪ್ಪ | ... ಸದಸ್ಯರು |
| 10. ಶ್ರೀ.ಕೆ.ಸೋಮಶೇಖರ್ | ... ಸದಸ್ಯರು |
| 11. ಡಾ.ರಾಜಗೋಪಾಲ್ | ... ಸದಸ್ಯರು |
| 12. ಪ್ರೊ.ಜಿ.ವೆಂಕಟೇಶ್‌ಕುಮಾರ್ | ... ಸದಸ್ಯರು |
| 13. ಪ್ರೊ.ಎಸ್.ಎಲ್.ಬೆಳಗಲಿ | ... ಸದಸ್ಯರು |
| 14. ಪ್ರೊ.ಬಿ.ಪಿ.ಮಹೇಶ್ ಚಂದ್ರ ಗುರು | ... ಸದಸ್ಯರು |
| 15. ಪ್ರೊ.ಭಾರತಿ ಪಿ ಸಾಲಿಮಠ್ | ... ಸದಸ್ಯರು |
| 16. ಪ್ರೊ.ಬಿ.ಕೆ.ತುಳಸೀಮಾಲ | ... ಸದಸ್ಯರು |
| 17. ಪ್ರೊ.ಆಯಿಷಾ ಎಂ ಶೆರೀಫ್ | ... ಸದಸ್ಯರು |
| 18. ಡಾ.ನಿಂಗಮ್ಮ ಸಿ ಬೆಟ್ಸೂರ್ | ... ಸದಸ್ಯರು |
| 19. ಶ್ರೀ ರಘು ಸಿ.ಎಸ್. | ... ಸದಸ್ಯರು |
| 20. ಶ್ರೀ ಬೆಳವಾಡಿ ಪ್ರಭಾಕರ್ | ... ಸದಸ್ಯರು |
| 21. ಡಾ.ಆರ್.ಟಿ.ಡಿ.ರಮೇಶ್ ಗಾಂಧಿ, ಗ್ರಂಥಪಾಲಕರು | ... ಸದಸ್ಯರು |
| 22. ಡಾ.ಸುರೇಶ್ ಬೆಂಜಮಿನ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ | ... ಸದಸ್ಯರು |
| 23. ಪ್ರೊ.ಯಶವಂತ ಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ. | ... ಸದಸ್ಯರು |
| 24. ಡಾ.ಎಸ್.ಶ್ರೀಕಂಠಸ್ವಾಮಿ, ನಿರ್ದೇಶಕರು,ಸಿ.ಡಿ.ಸಿ. | ... ಸದಸ್ಯರು |
| 25. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ | ... ಸದಸ್ಯರು |
| 26. ಪ್ರೊ.ಜೆ.ಸೋಮಶೇಖರ್, ಕುಲಸಚಿವರು(ಪರೀಕ್ಷಾಂಗ) | ... ಸದಸ್ಯರು |
| 27. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು | ... ಸದಸ್ಯರು |
| 28. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್, ಕುಲಸಚಿವರು | ... ಸದಸ್ಯ ಕಾರ್ಯದರ್ಶಿ |

ವಿಶೇಷ ಆಹ್ವಾನಿತರು

29.ಪ್ರೊ.ಟಿ.ಕೆ.ಉಮೇಶ್
30.ಪ್ರೊ.ಎನ್.ಉಷಾರಾಣಿ

ಸಭೆಗೆ ಹಾಜರಾಗದವರು

1. ಆಯುಕ್ತರು, ಕಾಲೇಜು ಶಿಕ್ಷಣ
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ
3. ಶ್ರೀ ರಾಮಚಂದ್ರೇಗೌಡ, ವಿಧಾನ ಪರಿಷತ್ ಸದಸ್ಯರು
4. ಶ್ರೀ.ಟಿ.ರಾಮಕೃಷ್ಣ
5. ಶ್ರೀ.ನಾಗೇಶ್ ಕರಿಯಪ್ಪ

ಮೊದಲಿಗೆ, ಮಾನ್ಯ ಕುಲಪತಿಗಳು, ಶಿಕ್ಷಣ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಾನ್ಯ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಕಾನೂನು ನಿಕಾಯದ ಡೀನರಾದ ಪ್ರೊ.ಸಿ.ಬಸವರಾಜು ಅವರನ್ನು ಸಭೆಗೆ ಸ್ವಾಗತಿಸಿದರು.

ನಂತರ ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಪ್ರೊ.ಎಸ್.ಎಲ್.ಬೆಳಗಲಿ, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ.ಬಿ.ಪಿ.ಮಹೇಶ್‌ಚಂದ್ರಗುರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಶ್ರೀ.ಕುಮಾರ್, ಪ್ರಾಂಶುಪಾಲರು, ಸುಜಲಾ ಕಾಲೇಜ್ ಆಫ್ ಕಾಮರ್ಸ್, ಹಾಸನ.
4. ಪ್ರೊ.ಎನ್.ಉಷಾರಾಣಿ, ಡೀನರು ಕಲಾ ನಿಕಾಯ – ವಿಶೇಷ ಆಹ್ವಾನಿತರು.

ಹಾಗೂ ಇದುವರೆವಿಗೂ ಶಿಕ್ಷಣ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ.ದಯಾನಂದ ಮಾನೆ, ಕಲಾ ನಿಕಾಯದ ಡೀನರಾಗಿ ಹಾಗೂ ಪ್ರಭಾರ ಕುಲಪತಿಗಳಾಗಿ,
2. ಶ್ರೀ.ಎಂ.ಕೆ.ಉಮಾನಾಥ್, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ.
3. ಪ್ರೊ.ಕೆ.ಎ.ರವೀಶ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

**I.1** ದಿನಾಂಕ 20-11-2017ರಂದು ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ.

ತೀರ್ಮಾನ: ದೃಢೀಕರಿಸಲಾಯಿತು

**II.1** **B.Sc Honor's Degree in Molecular biology** ಪದವಿ ಪ್ರದಾನ ಮಾಡುವ ಬಗ್ಗೆ.

ತೀರ್ಮಾನ: ಅನುಮೋದಿಸಲಾಯಿತು

**II.2** 1) **2017-18ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ ಸ್ವಾಯತ್ತ ಕಾಲೇಜಿನ ಹೆಸರನ್ನು 'ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು' ಎಂಬುದಾಗಿ ಬದಲಾವಣೆ ಮಾಡುವ ಬಗ್ಗೆ.**

2)**ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.**

ತೀರ್ಮಾನ: ಅನುಮೋದಿಸಲಾಯಿತು

**II.3** **2017-18ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.**

ತೀರ್ಮಾನ: ಪರಾಮರ್ಶನಾ ಸಮಿತಿಯು ಶಿಫಾರಸಿನಲ್ಲಿ subject to the ಎಂಬುದರ ಬದಲಾಗಿ on the ಎಂದು ಮಾರ್ಪಾಡು ಮಾಡಿಕೊಂಡು, ಸಮಿತಿಯು ಭೇಟಿ ನೀಡಿದ ಎಲ್ಲಾ ಕಾಲೇಜುಗಳ ವರದಿಯಲ್ಲಿಯೂ ಇದನ್ನು ಅಳವಡಿಸಿಕೊಳ್ಳುವಂತೆ ತೀರ್ಮಾನಿಸಿ, ಪರಾಮರ್ಶನಾ ಸಮಿತಿಯ ವರದಿಯನ್ನು ಅನುಮೋದಿಸಲಾಯಿತು

**II.4** **2017-18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.**

ತೀರ್ಮಾನ: ಅನುಮೋದಿಸಲಾಯಿತು

**II.5 2017–18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.**

ತೀರ್ಮಾನ: ಅನುಮೋದಿಸಲಾಯಿತು

**II.6 2017–18ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ.**

ಹಲವಾರು ಕಾಲೇಜುಗಳಲ್ಲಿ ಪ್ರಭಾರ ಪ್ರಾಂಶುಪಾಲರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ ಕೆಲವರಿಗೆ ನಿಯಮಾವಳಿ ಪ್ರಕಾರ ಪ್ರಾಂಶುಪಾಲರಾಗುವ ಅರ್ಹತೆ ಇಲ್ಲದೆ ಇರುವುದರಿಂದ ಸರ್ಕಾರ ಖಾಯಂ ಪ್ರಾಂಶುಪಾಲರ ನೇಮಕಾತಿಗೆ ಕ್ರಮ ಕೈಗೊಳ್ಳಬೇಕು ಹಾಗೂ ಕನಿಷ್ಠ 5 ವರ್ಷ ಅವರು ಒಂದೇ ಸ್ಥಳದಲ್ಲಿ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಸರ್ಕಾರವನ್ನು ಕೋರಿ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.

ತೀರ್ಮಾನ: ಅನುಮೋದಿಸಲಾಯಿತು

**II.7 2018–19ನೇ ಶೈಕ್ಷಣಿಕ ಸಾಲಿನಿಂದ ಮಂಡ್ಯದ ಮಾಂಡವ್ಯ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗೆಗೆ.**

ತೀರ್ಮಾನ: ಅನುಮೋದಿಸಲಾಯಿತು

**II.8 ಬಿ.ಎಡ್ ಕಾಲೇಜುಗಳ ಶೈಕ್ಷಣಿಕ ಅವಧಿಯನ್ನು ಜೂನ್–ಜುಲೈ ಅವಧಿಯಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.**

ಡಾ.ರಾಜಗೋಪಾಲ್‌ರವರು, ಬಿ.ಇಡಿ ಕಾಲೇಜುಗಳು ಪ್ರಸ್ತುತ ಡಿಸೆಂಬರ್–ಜನವರಿಯಲ್ಲಿ ಪ್ರಾರಂಭವಾಗುತ್ತಿದ್ದು, ಇದರಿಂದಾಗಿ ಕಾಲೇಜುಗಳಿಗೆ ಪ್ರವೇಶಾತಿ ಕಡಿಮೆಯಾಗಿದೆ. ಕೆಲ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಕೂಡ ತುಂಬಲು ಸಾಧ್ಯವಾಗುತ್ತಿಲ್ಲ, ಆದುದರಿಂದ ಬಿ.ಇಡಿ ಕೋರ್ಸನ್ನು ಜೂನ್ ಅಥವಾ ಜುಲೈ ತಿಂಗಳಲ್ಲಿ ಆರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನ ಕೈಗೊಳ್ಳಬೇಕೆಂದು ಸಭೆಯನ್ನು ಕೋರಿದರು.

ತೀರ್ಮಾನ: ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

**II.9 Life long distinguished Professor ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡಿ ಸಲ್ಲಿಸಿರುವ ಅಧಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರಿರುವ ಬಗ್ಗೆ.**

ತೀರ್ಮಾನ: ವಿಷಯವನ್ನು ಮುಂದಿನ ಸಭೆಯ ಮುಂದೆ ಮರು ಮಂಡಿಸುವಂತೆ ತೀರ್ಮಾನಿಸಲಾಯಿತು.

**II.10 ಪರಿಸರ ವಿಜ್ಞಾನ ವಿಷಯದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕುರಿತು.**

ಪರಿಸರ ವಿಜ್ಞಾನದ ಪದವಿ ತರಗತಿಯಲ್ಲಿ ಬೋಧನೆ ಹಾಗೂ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಕಲಾ ನಿಕಾಯದ ಅಧ್ಯಾಪಕರು ಮಾಡುತ್ತಿರುವುದರ ಬಗ್ಗೆ ಸಭೆಯು ಚರ್ಚಿಸಿತು. ಪರಿಸರ ವಿಜ್ಞಾನವು ವಿಜ್ಞಾನ ನಿಕಾಯದ ವಿಷಯವಾಗಿರುವುದರಿಂದ ಈ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪರಿಸರ ವಿಜ್ಞಾನದಲ್ಲಿ ಪಿಎಚ್.ಡಿ ಪಡೆದಿರುವ ಅಧ್ಯಾಪಕರು ಮಾತ್ರ ಬೋಧನೆ ಮತ್ತು ಮೌಲ್ಯಮಾಪನ ಮಾಡಬೇಕು ಎಂದು ಪರಿಸರ ಅಧ್ಯಯನ ಮಂಡಳಿ ಕೋರಿರುವುದನ್ನು ಸಭೆಯ ಮುಂದೆ ಮಂಡಿಸಲಾಯಿತು.

ತೀರ್ಮಾನ: ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು, ಪರಿಸರ ವಿಜ್ಞಾನವನ್ನು ಬೋಧಿಸುವ ಹಾಗೂ ಮೌಲ್ಯಮಾಪನ ಮಾಡಲು ಇದೇ ವಿಷಯದ ಬೋಧಕರ ಕೊರತೆಯಿರುವ ಕಾರಣ, ಎಲ್ಲಿ ಪರಿಸರ ವಿಜ್ಞಾನದ ಬೋಧಕರಿದ್ದಾರೆಯೋ ಅಲ್ಲಿ ಅವರ ಸೇವೆಯನ್ನು ಬಳಸಿಕೊಳ್ಳಬೇಕು, ಎಲ್ಲಿ ಇಂತಹ ಅಧ್ಯಾಪಕರು ಲಭ್ಯವಿರುವುದಿಲ್ಲವೋ ಅಂತಹ ಸಂದರ್ಭದಲ್ಲಿ ಇದೇ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂವಿಜ್ಞಾನ ಮತ್ತು ರೇಷ್ಮೆಕೃಷಿ ವಿಜ್ಞಾನದ ಬೋಧಕರಿಂದ ಪರಿಸರ ವಿಜ್ಞಾನ ಬೋಧಿಸುವ ಹಾಗೂ ಮೌಲ್ಯಮಾಪನ ಮಾಡಬೇಕೆಂದು ತೀರ್ಮಾನಿಸಿತು.

**II.11 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿಯ Life Science ಹಾಗೂ Social Sciences ಕೋರ್ಸುಗಳಿಗೆ Common Entrance Examination ನಡೆಸುವ ಬಗ್ಗೆ.**

ತೀರ್ಮಾನ: (1) Life Science ಅನ್ನು ಶೀರ್ಷಿಕೆಯನ್ನು ಬಳಸದೆ ಪರಿಸರ ವಿಜ್ಞಾನ ವಿಷಯವನ್ನು ಹೊರತುಪಡಿಸಿ 2018-19ನೇ ಶೈಕ್ಷಣಿಕ ಸಾಲಿಗೆ (1) ಪ್ರಾಣಿಶಾಸ್ತ್ರ (2)ಸಸ್ಯಶಾಸ್ತ್ರ (3) ಜೈವಿಕ ತಂತ್ರಜ್ಞಾನ (4) ಸೂಕ್ಷ್ಮ ಜೀವಾಣುಶಾಸ್ತ್ರ (5) ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ (6) ರೇಷ್ಮೆ ಕೃಷಿ (7) ಜೀವ ವಿಜ್ಞಾನ (ಸ್ನಾತಕೋತ್ತರ ಕೇಂದ್ರ, ಹಾಸನ) ಜೀವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, (8) ಜೀವರಸಾಯನಶಾಸ್ತ್ರ (9)ಅನ್ವಯಿಕ ಜೀವಶಾಸ್ತ್ರ ಕೋರ್ಸ್‌ಗಳಿಗೆ Common Entrance ನಡೆಸಲು ತೀರ್ಮಾನಿಸಲಾಯಿತು.

(2) Social Sciences ಅನ್ನುವ ಶೀರ್ಷಿಕೆಯನ್ನು ಬಳಸದೆ 2018-19ನೇ ಶೈಕ್ಷಣಿಕ ಸಾಲಿಗೆ (1) Comparative Literature and Translation Studies (2) Co-operative Management (3) Development Studies (4) Folklore (5) Jainology & Prakrit (6) Linguistics (7) West Asian Studies (8) Peace and Conflict Resolution (9) Philosophy (10) South

Indian Studies (11) Women's Studies (12) Rural Development (13) International Relations (14) M.L.I.Sc. (Master of Lib & Inf. Sc.) ಕೋರ್ಸ್‌ಗಳಿಗೆ Common Entrance ನಡೆಸಲು ತೀರ್ಮಾನಿಸಲಾಯಿತು.

(3) 2018–19ನೇ ಸಾಲಿಗೆ ನಡೆಯುವ ಸ್ನಾಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಮಾಡಿಕೊಳ್ಳಲು ನಡೆಸುವ ಪ್ರವೇಶಾತಿ ಪರೀಕ್ಷೆಯಲ್ಲಿ ಸಾಮನ್ಯ ವರ್ಗದ ವಿದ್ಯಾರ್ಥಿಗಳು 50 ಅಂಕಗಳಿಗೆ 10 ಅಂಕಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ವರ್ಗ–1 ವಿದ್ಯಾರ್ಥಿಗಳು 50 ಅಂಕಗಳಿಗೆ 08 ಅಂಕಗಳನ್ನು ಪಡೆಯಬೇಕೆಂದು ನಿರ್ಣಯಿಸಲಾಯಿತು.

**II.12 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆಯುವ ಎಲ್ಲಾ ಸ್ನಾತಕ, ಸ್ನಾತಕೋತ್ತರ ಮತ್ತು ಪಿ.ಹೆಚ್‌ಡಿ. ವಿದೇಶಿ ವಿದ್ಯಾರ್ಥಿಗಳು ಒಂದು ತಿಂಗಳ ಇಂಗ್ಲೀಷ್ ಕೋರ್ಸ್‌ನ್ನು ಮುಗಿಸುವ ಬಗೆಗೆ.**

**ತೀರ್ಮಾನ:** 2018–19ನೇ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಪಿಎಚ್.ಡಿ.ಗೆ ಪ್ರವೇಶ ಪಡೆಯುವ ವಿದೇಶಿ ವಿದ್ಯಾರ್ಥಿಗಳಿಗೆ ಒಂದು ತಿಂಗಳ ಕಾಲ ಇಂಗ್ಲಿಷ್ ಕಲಿಕಾ ತರಬೇತಿ (ಫಂಕ್ಷನಲ್ ಇಂಗ್ಲಿಷ್) ಪಡೆಯುವುದನ್ನು ಕಡ್ಡಾಯಗೊಳಿಸಲು ಸಭೆಯು ತೀರ್ಮಾನಿಸಿತು.

ವಿದೇಶಿ ವಿದ್ಯಾರ್ಥಿ ಭಾರತದಲ್ಲಿ ಪದವಿ ಪಡೆದಿದ್ದರೆ ಈ ನಿಯಮ ಅನ್ವಯವಾಗುವುದಿಲ್ಲ. ಆದರೆ, ವಿದೇಶದಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿದ್ದರೆ ಈ ನಿಯಮ ಅನ್ವಯವಾಗುತ್ತದೆ. ಕೆಲವು ದೇಶಗಳ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿ ಹಿಂದುಳಿದಿರುವುದರಿಂದ ಈ ಕೋರ್ಸ್ ನಡೆಸಲು ತೀರ್ಮಾನಿಸಲಾಯಿತು.

ವಿದೇಶಿ ವಿದ್ಯಾರ್ಥಿಗಳಿಗೆ ಈ ಇಂಗ್ಲಿಷ್ ಕೋರ್ಸ್ ಕಡ್ಡಾಯವಾಗಿರುತ್ತದೆ, ಇದಕ್ಕಾಗಿ ಪ್ರತಿ ವಿದೇಶಿ ವಿದ್ಯಾರ್ಥಿಯಿಂದ ಪ್ರವೇಶಾತಿ ಸಂದರ್ಭದಲ್ಲೇ ರೂ.5,000/– ಶುಲ್ಕವನ್ನು ವಿಶ್ವವಿದ್ಯಾನಿಲಯವು ಪಡೆಯಲಿದೆ. ಪದವಿ, ಸ್ನಾತಕೋತ್ತರ ಪದವಿ, ಪಿಎಚ್.ಡಿ ತರಗತಿಗಳಿಗೆ ಪ್ರವೇಶ ಪಡೆದ ಮೂರು ತಿಂಗಳ ಒಳಗಾಗಿ ಒಂದು ತಿಂಗಳ ಸ್ಪೋಕನ್ ಇಂಗ್ಲಿಷ್ ಕೋರ್ಸ್ ಅನ್ನು ಕಡ್ಡಾಯವಾಗಿ ಪಡೆದಿದ್ದು, ಈ ಕುರಿತು ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಯಾವುದೇ ವಿದೇಶಿ ವಿದ್ಯಾರ್ಥಿ ಪ್ರವೇಶ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕೌಶಲ್ಯವನ್ನು ಹೊಂದಿದ್ದರೆ, ಅಂತಹ ವಿದ್ಯಾರ್ಥಿಗಳಿಗೆ ಈ ಸ್ಪೋಕನ್ ಇಂಗ್ಲಿಷ್ ಕೋರ್ಸ್‌ನಿಂದ ವಿನಾಯಿತಿ ನೀಡಲು ತೀರ್ಮಾನಿಸಲಾಯಿತು.

**II.13 ಪ್ರೊ. ಹೆಚ್.ಎಸ್. ಪ್ರಕಾಶ್ ಚಿನ್ನದ ಪದಕ ದತ್ತಿ ಸ್ಥಾಪಿನೆ ಮಾಡುವ ಬಗ್ಗೆ.**

ತೀರ್ಮಾನ: ಅನುಮೋದಿಸಲಾಯಿತು

**II.14 ಡಾ. ಸಿ. ಉಷಾ ರಾವ್ ಸಮಾಜ ಕಾರ್ಯ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ.**

ತೀರ್ಮಾನ: ಅನುಮೋದಿಸಲಾಯಿತು

**II.15** <u>2017ರ ಪಿಹೆಚ್.ಡಿ ನಿಯಮಾವಳಿಯ ತಿದ್ದುಪಡಿಯ ಬಗ್ಗೆ.</u>

ತೀರ್ಮಾನ: 1. ಪಿಎಚ್.ಡಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕೆಲ ವಿದ್ಯಾರ್ಥಿಗಳು ಕೇವಲ ಕೆಲವೇ ಕೆಲವು ಅಂಕಗಳು ಕಡಿಮೆ ಬಂದು ಸಂಶೋಧನೆಗೆ ಅರ್ಹರಾಗುತ್ತಿಲ್ಲ; ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮರು ಮೌಲ್ಯಮಾಪನ ಮಾಡಿಸಿಕೊಳ್ಳಲು ಅವಕಾಶ ನೀಡಲು ಸಭೆಯು ತೀರ್ಮಾನಿಸಿತು.

2. ಸಂಶೋಧನೆಗೆ ಈಗಿರುವ ಅರ್ಹತಾ ಅಂಕಗಳು ಹೆಚ್ಚಾಗಿದ್ದು, ಕೆಲವು ವಿಭಾಗಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳ ಕೊರತೆ ಉಂಟಾಗುತ್ತಿದ್ದು, ಪ್ರಸ್ತುತ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಕನಿಷ್ಠ 55 ಅಂಕ, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ–1 ಕ್ಕೆ 50 ಅಂಕಗಳನ್ನು ನಿಗದಿಪಡಿಸಲಾಗಿದ್ದು, ಪ್ರವರ್ಗ–1ರ ಜೊತೆಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕೂಡ 50 ಅಂಕ ಹಾಗೂ ಪರಿಶಿಷ್ಟಜಾತಿ, ಪಂಗಡದ ವಿದ್ಯಾರ್ಥಿಗಳಿಗೆ 45 ಅಂಕಗಳನ್ನು ನಿಗದಿಪಡಿಸಬೇಕು ಎಂದು ಕೆಲವು ಸದಸ್ಯರು ಒತ್ತಾಯಿಸಿದಾಗ, ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯವು ಸರ್ಕಾರದ ನಿಯಮಾವಳಿಗಳನ್ವಯ ಕಾರ್ಯ ನಿರ್ವಹಿಸುವುದಾಗಿದ್ದು, ಈ ಬಗ್ಗೆ ವಿಶ್ವವಿದ್ಯಾನಿಲಯವು ಯಾವುದೇ ನಿರ್ಧಾರ ಕೈಗೊಳ್ಳಲಾಗದು, ಆದ್ದರಿಂದ ಮಾನ್ಯ ಸದಸ್ಯರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಸ್ಪಷ್ಟನೆ ಕೋರುವುದು ಸೂಕ್ತವೆಂದಾಗ, ಸಭೆಯು ಒಪ್ಪಿತು.

3. Regarding plagiarism a candidate has to procure a certificate for the test conducted on the thesis from the University librarian. The percentage of similar contents of the thesis **<u>must be within</u>** 30% should be changed as **<u>SHALL NOT EXCEED</u>**.

**II.16** <u>ಎಂ.ಎಸ್ಸಿ. ಮನೋವಿಜ್ಞಾನ ವಿಭಾಗದಲ್ಲಿ **Specialization** ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ **1.Clinical Psychology; 2.Organization / Industrial Psychology; 3.Animal Behaviour** ಎಂದು ನಮೂದಿಸಿ ಅಂಕಪಟ್ಟಿ ನೀಡುವ ಬಗ್ಗೆ.</u>

<u>ತೀರ್ಮಾನ:</u> ಎಂ.ಎಸ್ಸಿ ಮನೋವಿಜ್ಞಾನದ ವಿದ್ಯಾರ್ಥಿಗಳು ಐಚ್ಛಿಕ ವಿಷಯ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಮೂಲ ಅಂಕಪಟ್ಟಿಯಲ್ಲಿ ಅವರು ಆಯ್ಕೆ ಮಾಡಿಕೊಂಡ ಐಚ್ಛಿಕ ವಿಷಯವನ್ನು ನಮೂದಿಸಿ ಅಂಕಪಟ್ಟಿ ನೀಡಬೇಕು ಮತ್ತು ಇತರೆ ವಿಷಯಗಳಲ್ಲೂ ಸಹ ಐಚ್ಛಿಕ ವಿಷಯವಿರುವುದರಿಂದ ಆ ವಿಷಯವನ್ನು ಸಹ ಅಂಕಪಟ್ಟಿಯಲ್ಲಿ ನಮೂದಿಸಬೇಕೆಂದು ತೀರ್ಮಾನಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

1. ಪ್ರೊ.ಟಿ.ಕೆ.ಉಮೇಶ್‌ರವರು, ಹಿಂದಿನ ಸಭೆಯಲ್ಲಿ ಸಿ.ಬಿ.ಸಿ.ಎಸ್. ಪದ್ಧತಿಯನ್ನು ಯು.ಜಿ. ಕೋರ್ಸುಗಳಲ್ಲಿಯೂ ಅನುಸ್ಥಾನಗೊಳಿಸಲು ತೀರ್ಮಾನಿಸಲಾಗಿತ್ತು; ಈ ಸಂಬಂಧ ಮಾರ್ಗಸೂಚಿ ಹಾಗೂ ಕ್ರೆಡಿಟ್ ಪ್ಯಾಟ್ರನ್ ಅನ್ನು ಸಿದ್ಧಪಡಿಸಲಾಗುತ್ತಿದ್ದು, ಸದ್ಯದಲ್ಲಿಯೇ ಅಧ್ಯಯನ ಮಂಡಳಿಗಳ ವಿಶೇಷ ಸಭೆಯನ್ನು ಕರೆದು ಮಂಡಿಸಿ, ನಂತರ ನಿಕಾಯಗಳ ಅನುಮೋದನೆ ಪಡೆದು, ತದನಂತರ ಶಿಕ್ಷಣ ಮಂಡಳಿ ಸಭೆಯ ಅನುಮೋದನೆಗೆ ಮಂಡಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿ ಸಭೆಯ ಅನುಮತಿ ಕೋರಿದಾಗ, ಸಭೆಯು ಸಮ್ಮತಿಸಿತು.
2. ಡಾ. ರಾಜಗೋಪಾಲ್‌ರವರು ಬಿ.ಎಡ್. ಕೋರ್ಸಿನ ಪ್ರಾಯೋಗಿಕ ಪರೀಕ್ಷೆಯ ಮೌಲ್ಯಮಾಪಕರಿಗೆ ಸಂಭಾವನೆ ನೀಡುವ ಬಗ್ಗೆ ಪ್ರಸ್ತಾಪಿಸಿದಾಗ, ಮಾನ್ಯ ಕುಲಪತಿಗಳು ಈ ಬಗ್ಗೆ ಸಂಬಂಧಪಟ್ಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿದೆಯೆಂದರು.
3. ಡಾ. ರಾಜಗೋಪಾಲ್‌ರವರು, ಕ.ರಾ.ಮು.ವಿ.ಯಲ್ಲಿ ವ್ಯಾಸಂಗ ಮಾಡಿದ 2014–15ನೇ ಸಾಲಿನ ವಿದ್ಯಾರ್ಥಿಗಳನ್ನು ಬಿ.ಎಡ್. ಕೋರ್ಸಿಗೆ ಪ್ರವೇಶಾತಿ ಮಾಡಿಕೊಳ್ಳಬಹುದೇ ಎಂಬ ಬಗ್ಗೆ ಪ್ರಸ್ತಾಪಿಸಿದಾಗ, ಮಾನ್ಯ ಕುಲಪತಿಗಳು ಈ ಬಗ್ಗೆ ಸರ್ಕಾರದಿಂದ ಆದೇಶ ಬಂದ ನಂತರ ಅದನ್ನು ಅನುಸರಿಸಬಹುದಾಗಿದೆಯೆಂದರು.
4. ಶ್ರೀ ಬೆಳವಾಡಿ ಪ್ರಭಾಕರ್‌ರವರು, ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಹಳೆಯ ಸ್ಕೀಂ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಬಗ್ಗೆ ಪ್ರಸ್ತಾಪಿಸಿ, ದಿನಾಂಕ 07–01–2017 ರಂದು ನಡೆದ ಶಿಕ್ಷಣ ಮಂಡಳಿ ಸಭೆಯು ಹಳೆಯ ಎಲ್ಲಾ ಸ್ಕೀಂಗಳಡಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಒಂದು ವರ್ಷದ ಕಾಲಾವಕಾಶ ನೀಡುವಂತೆ ತೀರ್ಮಾನಿಸಿತ್ತು; ಅಂದರೆ ಹಳೆಯ ಸ್ಕೀಂಗೆ ಒಂದು ವರ್ಷವೆಂದರೆ ಎರಡು ಅವಕಾಶಗಳು. ಅದರಂತೆ ಪರೀಕ್ಷಾ ವಿಭಾಗವು ಹೊರಡಿಸಿದ್ದ ಅಧಿಸೂಚನೆಯಲ್ಲಿ RR/NRS/CSS ಮತ್ತು ISS ಸ್ಕೀಂಗಳಡಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಬಾಕಿ ಉಳಿಸಿಕೊಂಡಿರುವ ವಿಷಯಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಮತ್ತೆರಡು ಅವಕಾಶವನ್ನು ಅಂದರೆ ಜುಲೈ/ಆಗಸ್ಟ್ ಹಾಗೂ ನವೆಂಬರ್/ಡಿಸೆಂಬರ್ ಎಂದು ತಿಳಿಸಲಾಗಿತ್ತು. ಆದರೆ, ನವೆಂಬರ್/ಡಿಸೆಂಬರ್ ಪರೀಕ್ಷೆಗಳನ್ನು ಇನ್ನೂ ನಡೆಸಿರುವುದಿಲ್ಲ, ಆದ್ದರಿಂದ ಅವರಿಗೆ ಕೂಡಲೇ ಪರೀಕ್ಷೆ ನಡೆಸುವಂತೆ ಪ್ರಸ್ತಾಪಿಸಿದಾಗ, ಮಾನ್ಯ ಕುಲಪತಿಗಳು ಪರೀಕ್ಷಾ ವಿಭಾಗದ ಅಧಿಸೂಚನೆಯನ್ನು ಪರಿಶೀಲಿಸಿ, ಆ ರೀತಿಯಾಗಿದ್ದಲ್ಲಿ ಕೂಡಲೇ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದಾಗ, ಸಭೆಯು ಸಮ್ಮತಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅತ್ಯಮೂಲ್ಯ ಸಲಹೆ ಸಹಕಾರಗಳನ್ನು ನೀಡಿದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು | ಕುಲಪತಿಗಳು ಹಾಗೂ ಅಧ್ಯಕ್ಷರು |